# ‘ಸಮನ್ವಯದ ಕೊರತೆ ಇದೆ..

ರಾಜ್ಯದಲ್ಲಿ ಮಕ್ಕಳ ನಾಪತ್ತೆ ಪ್ರಕರಣಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿವೆ. ತೀರಾ ಇತ್ತೀಚಿನ ಅಂಕಿ ಅಂಶಗಳ ಪ್ರಕಾರ, ರಾಜ್ಯದಲ್ಲಿ ಪ್ರತಿದಿನ ಸರಾಸರಿ 10 ಮಕ್ಕಳು ನಾಪತ್ತೆಯಾಗುತ್ತಿದ್ದಾರೆ. ಇವರಲ್ಲಿ ಬೆರಳೆಣಿಕೆಯಷ್ಟು ಮಂದಿ ಪೋಷಕರ ಮಡಿಲು ಸೇರುತ್ತಿದ್ದಾರೆ. ಉಳಿದವರ ಕಣ್ಮರೆ ಆತಂಕ ಮೂಡಿಸಿದೆ. ನಾಪತ್ತೆ ಪ್ರಕರಣದಲ್ಲಿ ಬೆಂಗಳೂರು ನಗರ ಜಿಲ್ಲೆ ಅಗ್ರಸ್ಥಾನದಲ್ಲಿದ್ದು ಕುಖ್ಯಾತಿ ಗಳಿಸಿದೆ.

ನಾಪತ್ತೆಯಾದವರಲ್ಲಿ ಬಹಳ ಮಂದಿ ಕಳ್ಳಸಾಗಣೆಯಾಗಿ ಲೈಂಗಿಕವಾಗಿ ಶೋಷಣೆಗೆ ಒಳಗಾಗುತ್ತಿದ್ದಾರೆ. ಕೆಲವರು ಬಾಲಕಾರ್ಮಿಕರಾಗುತ್ತಿದ್ದಾರೆ. ಅನೇಕ ಹೆಣ್ಣು ಮಕ್ಕಳನ್ನು ವೇಶ್ಯಾವೃತ್ತಿಗೆ ತಳ್ಳಲಾಗುತ್ತಿದೆ. ಭಿಕ್ಷಾಟನೆ, ಮನೆಗೆಲಸ, ಜೀತಕ್ಕೂ ಇವರನ್ನು ಬಳಸಿಕೊಳ್ಳಲಾಗುತ್ತಿದೆ. ತಪ್ಪಿಸಿಕೊಂಡಿರುವ ಹಾಗೂ ಅಪಹರಣಗೊಂಡಿರುವ ಮಕ್ಕಳ ಪತ್ತೆ ಕಾರ್ಯದಲ್ಲಿ ಪೊಲೀಸರು ವಿಫಲರಾಗಿದ್ದಾರೆ ಎಂಬ ಆರೋಪಗಳೂ ಕೇಳಿಬರುತ್ತಿವೆ.

ಅಂತಹ ಮಕ್ಕಳ ಕೈಕಾಲುಗಳನ್ನು ತಿರುಚುವ ಹಾಗೂ ಕಣ್ಣು ಕೀಳುವ ಕೆಲಸವನ್ನು ಕೆಲವರು ಮಾಡುತ್ತಿದ್ದಾರೆ. ಇನ್ನೂ ಕೆಲವರನ್ನು ಅಂಗವಿಕಲಗೊಳಿಸಿ ಭಿಕ್ಷೆ ಬೇಡಲು ಹಾಗೂ ವೇಶ್ಯಾವೃತ್ತಿಗೆ ಕಳುಹಿಸುತ್ತಿದ್ದಾರೆ ಎಂಬುದು ಮಕ್ಕಳ ಹಕ್ಕುಗಳ ಹೋರಾಟಗಾರರ ಗಂಭೀರ ಆರೋಪ. ಮುಗ್ಧ ಮಕ್ಕಳ ಜೀವ ರಕ್ಷಣೆ ಮತ್ತು ಸ್ವಾತಂತ್ರ್ಯ ರಕ್ಷಿಸುವಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿಫಲವಾಗಿವೆ ಎಂದು ಅವರು ಆಕ್ರೋಶ ವ್ಯಕ್ತಪಡಿಸುತ್ತಾರೆ.

ಮಕ್ಕಳ ನಾಪತ್ತೆಗೆ ಕಾರಣಗಳೇನು, ಪರಿಹಾರೋಪಾಯಗಳೇನು ಎಂಬ ಬಗ್ಗೆ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಮಾಜಿ ಅಧ್ಯಕ್ಷೆ ನೀನಾ ಪಿ. ನಾಯಕ್ ಅವರು ಇಲ್ಲಿ ಅನಿಸಿಕೆ ಹಂಚಿಕೊಂಡಿದ್ದಾರೆ.



ನೀನಾ ಪಿ.ನಾಯಕ್

**▸ ಮಕ್ಕಳ ನಾಪತ್ತೆಗೆ ಮುಖ್ಯ ಕಾರಣಗಳೇನು?**

ಪೋಷಕರ ನಿರ್ಲಕ್ಷ್ಯ, ಬಡತನ ಹಾಗೂ ನಗರದ ವ್ಯಾಮೋಹ ಮನೆ ಬಿಟ್ಟು ಹೋಗಲು ಪ್ರಮುಖ ಕಾರಣ. ಗೆಳೆಯರ ಸಹವಾಸ, ದುಶ್ಚಟಗಳ ಕಾರಣದಿಂದ ಮನೆ ಬಿಡುವ ಮಕ್ಕಳೂ ಇದ್ದಾರೆ. ಪರೀಕ್ಷಾ ಭಯ ಹಾಗೂ ಅನುತ್ತೀರ್ಣಗೊಂಡಿದ್ದರಿಂದ ಪೋಷಕರಿಂದ ಹೊಡೆತ ತಿನ್ನಬೇಕಾಗುತ್ತದೆ ಎಂಬ ಆತಂಕದಿಂದ ಮನೆ ಬಿಟ್ಟು ಓಡಿ ಹೋಗುತ್ತಾರೆ. ದುಡಿದು ಸ್ವಾವಲಂಬಿಯಾಗುವ ಉದ್ದೇಶದಿಂದ ನಗರಕ್ಕೆ ಓಡಿ ಬರುತ್ತಾರೆ. ಚಿಣ್ಣರನ್ನು ಭಿಕ್ಷಾಟನೆಗೆ ಬಳಸಿಕೊಳ್ಳುವ, ಅಪಹರಣ ಮಾಡುವ ‘ಸಿಂಡಿಕೇಟ್’ಗಳು ಸಕ್ರಿಯವಾಗಿವೆ.

**▸ ಮಕ್ಕಳ ರಕ್ಷಣೆಗೆ ಪೋಷಕರು ವಹಿಸಬೇಕಾದ ಎಚ್ಚರಗಳೇನು?**

ಮಕ್ಕಳ ಮೇಲೆ ತಂದೆ– ತಾಯಿ ನಿಗಾ ಇಡಬೇಕು. ಅವರನ್ನು ನಿರ್ಲಕ್ಷ್ಯ ಮಾಡಬಾರದು. ಚಿಣ್ಣರಿಗೆ ಮನೆಯ ವಿಳಾಸ, ದೂರವಾಣಿ ಸಂಖ್ಯೆಯನ್ನು ಕಂಠಪಾಠ ಮಾಡಿಸಬೇಕು. ಪ್ರಯಾಣದ ವೇಳೆಯಲ್ಲಿ ಅಪರಿಚಿತರ ರಕ್ಷಣೆಯಲ್ಲಿ ಬಿಡಬಾರದು. ಮುಖ್ಯವಾಗಿ ಮಕ್ಕಳನ್ನು ಸ್ನೇಹಿತರಂತೆ ಕಾಣಬೇಕು. ಅವರ ಸಮಸ್ಯೆಗಳನ್ನು ನಿಸ್ಸಂಕೋಚವಾಗಿ ಹೇಳಿಕೊಳ್ಳುವಂತಹ ಮುಕ್ತ ವಾತಾವರಣ ನಿರ್ಮಿಸಬೇಕು. ಸಣ್ಣಪುಟ್ಟ ವಿಷಯಗಳಿಗೂ ಮಕ್ಕಳ ಮೇಲೆ ಕೋಪಿಸಿಕೊಳ್ಳಬಾರದು. ಅವರು ಶಾಲೆಯಲ್ಲಿ ಅನುಭವಿಸುವ ಒತ್ತಡ ಹಾಗೂ ಸಮಸ್ಯೆಗಳನ್ನು ಪೋಷಕರೇ ಕೇಳಿ ತಿಳಿದು ಪರಿಹರಿಸಬೇಕು.

**▸ ಸಂವಹನ ತಂತ್ರಜ್ಞಾನ ಇಷ್ಟೆಲ್ಲ ಅಭಿವೃದ್ಧಿ ಹೊಂದಿದರೂ ಮಕ್ಕಳ ನಾಪತ್ತೆ**

ಚಿತ್ರ: ವಿಶ್ವನಾಥ ಸುವರ್ಣ



★ ನಗರಗಳಿಂದ ಹಳ್ಳಿಗೆ ಬರುವ ಯುವಕರಲ್ಲಿ ಹಲವರು ಮುಗ್ಧ ಹುಡುಗಿಯರನ್ನು ಪ್ರೀತಿಸಿ ಮದುವೆಯಾಗುವುದಾಗಿ ನಂಬಿಸಿ ಕರೆದುಕೊಂಡು ಹೋಗಿ ವೇಶ್ಯಾವಾಟಿಕೆಗಳಿಗೆ ಮಾರುತ್ತಾರೆ.

★ ದತ್ತು ಕೇಂದ್ರಗಳ ಹೆಸರಿನಲ್ಲಿ ನಡೆಯುವ ದಂಧೆಯಲ್ಲಿ ಕೇಂದ್ರದ ಮಕ್ಕಳನ್ನು ಅನೈತಿಕ ಕಾರ್ಯಗಳಿಗೆ ಬಳಸುವ ಉದ್ದೇಶದಿಂದ ಸರಿಯಾದ ದಾಖಲೆಗಳಿಲ್ಲದೆ ವಿದೇಶಗಳಿಗೆ ರವಾನೆ ಮಾಡುತ್ತಾರೆ.

★ ಮಕ್ಕಳನ್ನು ಅಂಗಹೀನಗೊಳಿಸಿ ಭಿಕ್ಷಾಟನೆಗೆ ತಳ್ಳುವುದಂತೂ ಅನೇಕ ವರ್ಷಗಳಿಂದ ಎಗ್ಗಿಲ್ಲದೆ ಸಾಗುತ್ತ ಬಂದಿದೆ.

★ ಇತ್ತೀಚಿನ ಬೆಳವಣಿಗೆಗಳ ಪ್ರಕಾರ, ಅಕ್ರಮವಾಗಿ ಅಂಗಾಂಗಗಳ ಮಾರಾಟ ಮಾಡುವ ಉದ್ದೇಶಗಳಿಂದ ಮಕ್ಕಳನ್ನು ಅಪಹರಿಸಲಾಗುತ್ತದೆ. ಇಂತಹ ಹಲವು ಪ್ರಕರಣಗಳಲ್ಲಿ ಮಕ್ಕಳು ಶವವಾಗಿ ಸಿಕ್ಕಿದ್ದೇ ಹೆಚ್ಚು.

★ ದೇಶದ ಕೆಲವು ರಾಜ್ಯಗಳಲ್ಲಿ ಹೆಣ್ಣು ಭ್ರೂಣಹತ್ಯೆ ಹಾಗೂ ಶಿಶುಹತ್ಯೆಗಳ ಪರಿಣಾಮ ಹೆಣ್ಣು –ಗಂಡು ಅನುಪಾತ ಕುಸಿದಿದ್ದು ವಿವಾಹ ಯೋಗ್ಯ ಸ್ತ್ರೀಯರ ತೀವ್ರ ಕೊರತೆ ಉಂಟಾಗಿದೆ. ಅಂತಹ ಪ್ರದೇಶಗಳಲ್ಲಿ ದೇಶದ ವಿವಿಧ ರಾಜ್ಯಗಳಿಂದ ಅಪಹರಿಸಿ ತಂದ ಹೆಂಗಸರನ್ನು ಮಾರಾಟ